# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ/ಎಸ್.ಟಿ.28/2025

ಪಿರ್ಯಾದಿಃ ಹಲಗೇರಿ ಪೊಲೀಸ್ ಠಾಣೆ

**-ವಿರುದ್ಧ-**

ಆರೋಪಿ ಹೆಸರುಃ

ತಂದೆಃಗಂಡನ ಹೆಸರುಃ

ವಯಸ್ಸುಃ ವರ್ಷ

ವಾಸ ಸ್ಥಳಃ

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿ ಹೇಳಿಕೆ

ಪ್ರಶ್ನೆ-1 ನ್ಯಾಯಾಲಯದ ಮುಂದೆ ಅಭಿಯೋಜನೆ ಪರವಾಗಿ ನುಡಿದಂತಹ ಸಾಕ್ಷಿದಾರರ ಸಾಕ್ಷ್ಯ ಹೇಳಿಕೆಗಳನ್ನು ಕೇಳಿಸಿಕೊಂಡಿದ್ದೀರಾ?

ಉತ್ತರಃ

ಪ್ರಶ್ನೆ-2 ಅ.ಸಾ-1, ಭರಮಪ್ಪ ಬಂಗೇರ, ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಈಗ್ಗೆ ಒಂದು ವರ್ಷದ ಹಿಂದೆ ನಮ್ಮೂರಿನ ಕುರುಬ ಜಾತಿಗೆ ಸೇರಿದ ಒಬ್ಬ ಹುಡುಗ ಚಿತ್ರದುರ್ಗದಿಂದ ಒಬ್ಬ ಹುಡುಗಿಯನ್ನು ಕರೆದುಕೊಂಡು ಬಂದಿದ್ದನು. ಆಗ ಚಿತ್ರದುರ್ಗದ ಹುಡುಗಿ ಮನೆಯವರು ಹುಡುಗಿಯನ್ನು ಕರೆದುಕೊಂಡು ಹೋಗಲು ನಮ್ಮೂರಿಗೆ ಬಂದಿದ್ದರು. ಆಗ ನಮ್ಮೂರಿನ ಯಜಮಾನರು ಪಂಚಾಯತಿ ಮಾಡಿ ಸದರಿ ಹುಡುಗಿಯನ್ನು ಆಕೆಯ ತಂದೆ-ತಾಯಿ ಜೊತೆ ನಮ್ಮೂರಿನಿಂದ ಚಿತ್ರದುರ್ಗಕ್ಕೆ ಕಳಿಸಿಕೊಟ್ಟರು. 1 ನೇ ಆರೋಪಿಯು ರಾಜೀ ಪಂಚಾಯತಿ ಮಾಡುವಾಗ ಕುಡಿದು ಬಂದು ಗಲಾಟೆ ಮಾಡುತ್ತಿದ್ದನು. ಆಗ ಪಂಚಾಯತಿದಾರರು 1 ನೇ ಆರೋಪಿಗೆ ಬೈದು ಬುದ್ದಿವಾದ ಹೇಳಿ ಕಳಿಸಿಕೊಟ್ಟರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ-3 ಅ.ಸಾ-1, ಮುಂದುವರೆದು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಅದೇ ದಿನ ರಾತ್ರಿ 7.30-8.00 ಗಂಟೆ ಸಮಯದಲ್ಲಿ ನಾನು ನಮ್ಮೂರಿನ ಹನುಮಂತ ದೇವರ ಸರ್ಕಲ್ ಹತ್ತಿರ ಕುಳಿತುಕೊಂಡಿದ್ದಾಗ ಅಲ್ಲಿಗೆ 1 ನೇ ಆರೋಪಿಯು ಬಂದು ನನ್ನನ್ನು ಕರೆದರು. ಆಗ ನಾನು 1 ನೇ ಆರೋಪಿಯ ಜೊತೆ ಹೋದೆನು. 1 ನೇ ಆರೋಪಿಯು ಕಲ್ಲನ್ನು ತೆಗೆದುಕೊಂಡು ನನ್ನ ತಲೆಗೆ ಹೊಡೆದನು. 1 ನೇ ಆರೋಪಿಯು ತಳವಾರ ಜಾತಿಗೆ ಹುಟ್ಟಿದವರು ಎಷ್ಟು ಜನ ಇದ್ದೀರಿ, ನಿಮ್ಮಪ್ಪನಿಗೆ ಹುಟ್ಟಿದ್ದರೆ ಬನ್ನಿ ಎಂದು ಬೈದರು. 1 ನೇ ಆರೋಪಿಯ ತಂದೆ ಬೀರಪ್ಪ ಬಂದು ನನಗೆ ನಮ್ಮ ಮನೆ ಸುದ್ದಿ ನಿನಗೇಕೆ ಬೇಕು ಎಂದು ಬೈದನು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ-4 ಅ.ಸಾ-1, ಮುಂದುವರೆದು ತಮ್ಮ ಸಾಕ್ಷಿ ವಿಚಾರಣೆಯಲ್ಲಿ 1 ನೇ ಆರೋಪಿಯು ನನಗೆ ಕಲ್ಲಿನಿಂದ ಹೊಡೆದಾಗ ನನ್ನ ತಲೆಯಿಂದ ರಕ್ತ ಬಂತು. ಆಗ ನನ್ನ ಅಣ್ಣನ ಮಗ ಪ್ರವೀಣ ಮೋಟಾರ್ ಸೈಕಲ್ ತೆಗೆದಕೊಂಡು ಬಂದು ನನ್ನನ್ನು ಹಲಗೇರಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದನು. ಆಗ ಪೊಲೀಸರು ಬರೆದುಕೊಂಡು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಗೆ ದಾಖಲಾಗಿ ಎಂದು ಕಳಿಸಿಕೊಟ್ಟರು. ಆಗ ನಮ್ಮ ಅಣ್ಣನ ಮಗ ಪ್ರವೀಣ ಈತನು ಮೋಟಾರ್ ಸೈಕಲ್ ನಲ್ಲಿ ರಾಣೇಬೆನ್ನೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲುಮಾಡಿದನು. ಅಲ್ಲಿ ವೈದ್ಯರು ನನ್ನನ್ನು ಒಂದು ರಾತ್ರಿ ಆಸ್ಪತ್ರೆಯಲ್ಲಿ ದಾಖಲುಮಾಡಿಕೊಂಡು ಚಿಕಿತ್ಸೆ ನೀಡಿ ತಲೆಗೆ ಸ್ಕ್ಯಾನಿಂಗ್ ಮಾಡಿಸಲು ಹಾವೇರಿ ಜಿಲ್ಲಾ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಬರೆದುಕೊಟ್ಟರು. ಆಗ ನಾನು ಹಾವೇರಿ ಜಿಲ್ಲಾ ಆಸ್ಪತ್ರೆಗೆ ಬಂದು ಹೆಚ್ಚಿನ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ-5 ಅ.ಸಾ-1, ಮುಂದುವರೆದು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ನಂತರ ಪೊಲೀಸ್ ಠಾಣೆಯಲ್ಲಿ ನಿಪಿ-4 ರಂತೆ ದೂರನ್ನು ದಾಖಲುಮಾಡಿರುತ್ತೇನೆ, ದೂರು ಕೊಟ್ಟ 2 ದಿನಗಳ ನಂತರ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿಕೊಟ್ಟು ನಾನು ತೋರಿಸಿದ ಜಾಗದಲ್ಲಿ ನಿಪಿ-6 ರಂತೆ ಸ್ಥಳ

ಪಂಚನಾಮೆ ಮಾಡಿಕೊಂಡು, ನನ್ನ ಸಹಿ ಪಡೆದುಕೊಂಡರು. ಪೊಲೀಸರು ಸ್ಥಳ ಪಂಚನಾಮೆ ಮಾಡುವ ಕಾಲಕ್ಕೆ ಅಲ್ಲಿದ್ದ ಕಲ್ಲನ್ನು ವಶಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ಮಾಡುವ ಕಾಲಕ್ಕೆ ನಿಪಿ–7 ರಂತೆ ಪೊಲೀಸರು ಪೋಟೋವನ್ನು ಸಹ ತೆಗೆದುಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ–6 ಅ.ಸಾ–2, ನಿಂಗಪ್ಪ ಅಮರಾವತಿ ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಈಗ್ಗೆ 6–7 ತಿಂಗಳ ಹಿಂದೆ ನಮ್ಮೂರಿನ ಹನುಮಂತ ದೇವರ ಸರ್ಕಲ್ ಹತ್ತಿರ ಆರೋಪಿಗಳು ಪಿರ್ಯಾದಿಯೊಂದಿಗೆ ಜಗಳ ಮಾಡಿದ್ದರು. ಈ ವಿಚಾರವಾಗಿ ಪೊಲೀಸರು ಸದರಿ ಜಗಳ ಆದ 02 ದಿನಗಳ ನಂತರ ಸದರಿ ಘಟನಾ ಸ್ಥಳಕ್ಕೆ ಬಂದಿದ್ದರು. ಆಗ ನಾನು, ಚಾಸಾ–3–ಬಸವರಾಜ, ಚಾಸಾ–5–ವಿಜಯಕುಮಾರ, ಆರೋಪಿತರಿಂದ ಹೊಡೆಸಿಕೊಂಡ ಭರಮಪ್ಪ ಮತ್ತು ಇತರರು ಇದ್ದೆವು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ–7 ಅ.ಸಾ–2, ಮುಂದುವರೆದು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಆಗ ಪೊಲೀಸರಿಗೆ ನಾವೆಲ್ಲರೂ ಇದೇ ಜಗಳ ಆದ ಜಾಗ ಎಂದು ತೋರಿಸಿದೆವು. ಆಗ ಪೊಲೀಸರು ಯಾವುದರಿಂದ ಹೊಡೆದಿರುತ್ತಾರೆ ಎಂದು ನಮ್ಮನ್ನು ಕೇಳಿದರು. ಆಗ 1 ನೇ ಆರೋಪಿಯು ಕಾಡು ಕಲ್ಲಿನಿಂದ ಪಿರ್ಯಾದಿಗೆ ಹೊಡೆದಿರುತ್ತಾನೆಂದು ತಿಳಿಸಿದೆವು. ಆಗ ಪೊಲೀಸರು ಸದರಿ ಕಲ್ಲನ್ನು ತೆಗೆದುಕೊಂಡು ನಿಪಿ–6 ರಂತೆ ಸ್ಥಳ ಪಂಚನಾಮೆ ಜರುಗಿಸಿ, ನಿಪಿ–7 ರಂತೆ ಪೋಟೋ ತೆಗೆದು, ಪಂಚನಾಮೆಗೆ ನನ್ನ ಸಹಿ ಪಡೆದುಕೊಂಡರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ–8 ಅ.ಸಾ–3, ಬಸವರಾಜ ಸಾವಜ್ಜಿ ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಈಗ್ಗೆ ಒಂದು ವರ್ಷದ ತಿಂಗಳ ಹಿಂದೆ ನಮ್ಮೂರಿನ ಆಂಜನೇಯ ದೇವರ ಸರ್ಕಲ್ ಹತ್ತಿರ ಆರೋಪಿಗಳು ಪಿರ್ಯಾದಿಯೊಂದಿಗೆ ಜಗಳ ಮಾಡಿದ್ದರು. ಈ ವಿಚಾರವಾಗಿ ಡಿವೈಎಸ್ಪಿರವರು ಜಗಳ ಆದ

02 ದಿನಗಳ ನಂತರ ಸದರಿ ಘಟನಾ ಸ್ಥಳಕ್ಕೆ ಬಂದಿದ್ದರು. ಆಗ ಸದರಿ ಪೊಲೀಸರು ಗ್ರಾಮಸ್ಥರನ್ನು ಅಲ್ಲಿಗೆ ಕರೆಸಿದರು. ಅವರ ಪೈಕಿ ನಾನು, ನಿಂಗಪ್ಪ, ಭರಮಪ್ಪ ಇನ್ನಿತರರು ಇದ್ದೆವು. ಆಗ ಅಲ್ಲಿ ಪೊಲೀಸರು ನಿಪಿ–6 ರಂತೆ ಪಂಚನಾಮೆ ಜರುಗಿಸಿ, ಒಂದು ಕಲ್ಲನ್ನು ವಶಪಡಿಸಿಕೊಂಡು, ನಿಪಿ–7 ರಂತೆ ಫೋಟೋ ತೆಗೆದುಕೊಂಡು ನಮ್ಮಗಳ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ–9 ಅ.ಸಾ–5, ಶಿವಪ್ಪ ಹುಣಸಿಕಟ್ಟಿ ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಈಗ್ಗೆ ಒಂದು ವರ್ಷದ ಹಿಂದೆ ಸಾಯಂಕಾಲ 7.30 ಗಂಟೆ ಸಮಯದಲ್ಲಿ ನಾನು ನಮ್ಮೂರಿನ ಆಂಜನೇಯ ಗುಡಿ ಹತ್ತಿರ ಇರುವ ಹಿಟ್ಟು ಬೀಸುವ ಗಿರಣಿ ಕಟ್ಟೆ ಮೇಲೆ ಕುಳಿತಿದ್ದೆನು. ಚಾಸಾ–1 ರವರೂ ಸಹ ಗಿರಣಿ ಕಟ್ಟೆ ಮೇಲೆ ಕುಳಿತಿದ್ದನು. ಆಗ 1 ನೇ ಆರೋಪಿ ಉಮೇಶನು ಚಾಸಾ–1 ರವರನ್ನು ಕರೆದನು ಆಗ ಚಾಸಾ–1 ರವರು ಕಟ್ಟೆ ಮೇಲಿಂದ ಎದ್ದು, 1 ನೇ ಆರೋಪಿ ಹತ್ತಿರ ಹೋದನು. ಆಗ 1 ನೇ ಆರೋಪಿಯು ಚಾಸಾ–1 ರವರಿಗೆ ನಿಮ್ಮವ್ವನ ಅಂತಾ ಸೂಳೇ ಮಕ್ಕಳಾ ಇಂತಾ ಸೂಳೇ ಮಕ್ಕಳಾ ಅಂತಾ ಬೈದು, ಕಲ್ಲಿನಿಂದ ತಲೆಗೆ ಹೊಡೆದನು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ–10 ಅ.ಸಾ–5, ಮುಂದುವರೆದು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಆರೋಪಿತರು ಚಾಸಾ–1 ರವರಿಗೆ ಜಾತಿ ಹೆಸರು ಹಿಡಿದು ತಳವಾರ ಜಾತಿ ಸೂಳೇ ಮಕ್ಕಳಾ ನೀವು ಅಂತವರು, ಇಂತಹವರು ಎಂದು ಬೈದರು ಎಂದು ಹಾಗೂ ನ್ಯಾಯಾಲಯದ ಮುಂದಿರುವ ಒಂದು ಕಲ್ಲನ್ನು ನೋಡಿ ಗುರುತಿಸಿದ್ದು, ನಂತರ ಚಾಸಾ–1 ರವರನ್ನು ಚಿಕಿತ್ಸೆಗಾಗಿ ದವಾಖಾನೆಗೆ ಕರೆದುಕೊಂಡು ಹೋದರು. ನಾನು ಪೊಲೀಸರ ಮುಂದೆ ಘಟನೆಯ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ-11 ಅ.ಸಾ-4, ವಿಜಯಕುಮಾರ ನಾಯಕ್ ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಈಗ್ಗೆ 11 ತಿಂಗಳ ಹಿಂದೆ ನಮ್ಮೂರಿನ ಒಬ್ಬ ಹುಡುಗ ಯಾವುದೋ ಒಂದು ಊರಿನ ಹುಡುಗಿಯನ್ನು ಕರೆದುಕೊಂಡು ಬಂದಿದ್ದನು. ಆಗ ನಮ್ಮೂರಿನ ಯಜಮಾನರು ಮಾತುಕತೆ ಮಾಡುತ್ತಿದ್ದರು. ಅದೇ ದಿನ ಸಂಜೆ 7.00 ಗಂಟೆ ಸಮಯದಲ್ಲಿ ಪಿರ್ಯಾದಿ ಭರಮಪ್ಪ ಹನುಮಂತ ದೇವರ ಗುಡಿ ಹತ್ತಿರ ಕುಳಿತುಕೊಂಡಿದ್ದನು. ನಾನು ಅಡಿಕೆ-ಎಲೆ ತೆಗೆದುಕೊಂಡು ಅಲ್ಲಿಗೆ ಬಂದೆನು. ಆಗ ಆರೋಪಿತರು ಭರಮಪ್ಪನನ್ನು ಕಾಕಾ ಬಾ ಇಲ್ಲಿ ಎಂದು ಕರೆದು 1 ನೇ ಆರೋಪಿ ಉಮೇಶ ಈತನು ಕಲ್ಲನ್ನು ತೆಗೆದುಕೊಂಡು ಭರಮಪ್ಪನ ತಲೆಗೆ ಹೊಡೆದನು. ಆಗ ಭರಮಪ್ಪನ ತಲೆ ಒಡೆದು ರಕ್ತ ಬಂತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ-12 ಅ.ಸಾ-4, ಮುಂದುವರೆದು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಆಗ ರವಿ ಎಂಬ ವ್ಯಕ್ತಿಯು ಗಾಯಾಳು ಭರಮಪ್ಪನನ್ನು ಮೋಟಾರ್ ಸೈಕಲ್ ನಲ್ಲಿ ಹಲಗೇರಿ ಪೊಲೀಸ್ ಠಾಣೆಗೆ ಹೋದರು. ನಂತರ ರಾಣೇಬೆನ್ನೂರು ಸರ್ಕಾರಿ ಆಸ್ಪತ್ರೆಗೆ ಭರಮಪ್ಪನನ್ನು ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲುಮಾಡಿದರು. ಪೊಲೀಸರು ನಮ್ಮೂರಿಗೆ ಬಂದು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ. ಆರೋಪಿತರು ಪಿರ್ಯಾದಿಗೆ ಹಲ್ಲೆ ಮಾಡಲು ಉಪಯೋಗಿಸಿದ ಕಲ್ಲನ್ನು ನೋಡಿದರೆ ಗುರುತಿದ ಬಗ್ಗೆ ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ-13 ಅ.ಸಾ-4, ಮುಂದುವರೆದು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಆರೋಪಿತರು ಪಿರ್ಯಾದಿಗೆ ಕರೆದು ಬೋಸುಡಿ ಮಗನೇ, ನಿನ್ನ ತಾಯಿನ ಹಡಾ ಎಂದು ಅವಾಚ್ಯ ಶಬ್ದಗಳಿಂದ ಬೈದು, ನಮಗೆ ಬುದ್ದಿ ಹೇಳುತ್ತೀಯಾ ಕೀಳು ವಾಲ್ಮೀಕಿ ಜಾತಿ ಸೂಳೇ ಮಗನೇ ಎಂದು ಬೈದು ಜಾತಿ ನಿಂದನೆ ಮಾಡಿದರು, 1 ನೇ ಆರೋಪಿಯು ಕಲ್ಲಿನಿಂದ ಚಾಸಾ-1 ರವರ ತಲೆಗೆ ಹೊಡೆದಿದ್ದರಿಂದ ರಕ್ತ ಗಾಯವಾಗಿದ್ದು, ಆಗ ಭರಮಪ್ಪ ದೊಡ್ಡಪ್ಪನ ಮಗ ಹನುಮಂತಪ್ಪ ಬಂಗೇರ ಈತನು ಚಾಸಾ-1 ರವರನ್ನು ರಾಣೇಬೆನ್ನೂರು ಆಸ್ಪತ್ರೆಗೆ

ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲು ಮಾಡಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ-14 ಅ.ಸಾ-7, ಮಹೇಶ ವಡೆಯರಹಳ್ಳಿ ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಈ ಪ್ರಕರಣದ ತನಿಖಾಧಿಕಾರಿಯ ಆದೇಶದ ಮೇರೆಗೆ ದಿನಾಂಕಃ19.04.2025 ರಂದು ಹಾರೋಗೊಪ್ಪ ಗ್ರಾಮದ ಆಂಜನೇಯ ದೇವಸ್ಥಾನದ ಹತ್ತಿರ ಘಟನಾ ಸ್ಥಳಕ್ಕೆ ಭೇಟಿಕೊಟ್ಟು ತನಿಖಾಧಿಕಾರಿಯು ಘಟನಾ ಸ್ಥಳದಲ್ಲಿ ಸ್ಥಳ ಪಂಚನಾಮೆ ಮಾಡುವ ಕಾಲಕ್ಕೆ ಹಾಜರಿದ್ದು, ಅವರ ಆದೇಶದ ಮೇರೆಗೆ ಡಿವೈಎಸ್ಪಿರವರ CWC company ಮೊಬೈಲ್ ನಿಂದ ನಿಪಿ-7 ರಂತೆ ಪೋಟೋವನ್ನು ತೆಗೆದಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ-15 ಅ.ಸಾ-7, ಮುಂದುವರೆದು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ನಂತರ ಠಾಣೆಗೆ ಹಿಂದಿರುಗಿ ಠಾಣೆಯ ಗಣಕಯಂತ್ರಕ್ಕೆ ಪೋಟೋವನ್ನು ಡೇಟಾ ಕೇಬಲ್ ಸಹಾಯದಿಂದ ಅಡಕ ಮುದ್ರಿಕೆಗೆ ಹಾಕಿ, ಪ್ರಿಂಟ್ ತೆಗೆಸಿ ನಿಪಿ-10 ರಂತೆ ವರದಿಯೊಂದಿಗೆ ಮತ್ತು ಪೋಟೋ ಮತ್ತು ಅಡಕ ಮುದ್ರಿಕೆಯೊಂದಿಗೆ ಹಾಗೂ ಪ್ರಮಾಣ ಪತ್ರದೊಂದಿಗೆ ತನಿಖಾಧಿಕಾರಿ ಮುಂದೆ ಹಾಜರುಪಡಿಸಿರುತ್ತೇನೆ ಈ ಕುರಿತು ನಾನು ತನಿಖಾಧಿಕಾರಿ ಮುಂದೆ ನನ್ನ ಪ್ರತ್ಯೇಕ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ-16 ಅ.ಸಾ-8, ನೇಮಪ್ಪ ನಾಯಕ್, ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕಃ17.04.2025 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ನಾನು ಹಲಗೇರಿ ಪೊಲೀಸ್ ಠಾಣೆಯಲ್ಲಿ ಠಾಣಾಧಿಕಾರಿಯಾಗಿ ಕರ್ತವ್ಯದಲ್ಲಿದ್ದಾಗ ಈ ಪ್ರಕರಣದ ಪಿರ್ಯಾದಿ ಠಾಣೆಗೆ ಹಾಜರಾಗಿ ನಿಪಿ-4 ರಂತೆ ಒಂದು ಲಿಖಿತ ದೂರನ್ನು ಸಲ್ಲಿಸಿದ್ದು, ಸದರಿ ದೂರನ್ನು ಸ್ವೀಕರಿಸಿಕೊಂಡು ಠಾಣಾ ಮೊಕದ್ದಮೆ ಸಂಖ್ಯೆಃ75 ರಡಿಯಲ್ಲಿ ಭಾ.ನ್ಯಾ.ಸಂ.ಕಲಂ.118(1)

ಮತ್ತು 352 ಸಹವಾಚಕ 3(5)ರಡಿಯಲ್ಲಿ ಮತ್ತು SC/ST (POA) ಕಾಯಿದೆ ಕಲಂ.3(1)(r) ರಡಿಯಲ್ಲಿ ಪ್ರಕರಣವನ್ನು ದಾಖಲುಮಾಡಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೂ ಮತ್ತು ಮೇಲಾಧಿಕಾರಿಗಳಿಗೂ ಪಿಸಿ ನಂ.1236 ರವರ ಮೂಲಕ ಕಳಿಸಿಕೊಟ್ಟಿರುತ್ತೇನೆ ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-14 ರವರಿಗೆ ವಹಿಸಿಕೊಟ್ಟಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ-17 Pw-6, Dr. Govinda U has deposed in his evidence that on 16.04.2025 at about 10.00 p.m, when he was working as Sr. Medical Officer of General Hospital, Ranebennur, one injured namely Baramappa Halappa Bangera aged about 51 years, R/o; Harogoppa, Ranebennur came to hospital with the history of assault. Accordingly, he examined the injured and noticed 1) Lacerated wound on head. 2) Lacerated wound on the right side of face. What do you say?

Ans:

ಪ್ರಶ್ನೆ-18 Pw-6 further deposed in his evidence that he provided medical treatment to the injured and thereafter referred the injured to District Hospital Haveri for CT scan. Accordingly, the injured has undergone CT scan at District Hospital, Haveri. he received CT scan report as per which there was no significant abnormality detected. Accordingly, he has issued the wound certificate as per Ex.P-8 to the effect that the injuries sustained by the injured are simple in nature. The injuries as mentioned on Ex.P-8 and as sustained by the injured are possible if assaulted with MO-1 stone. What do you say?

Ans:

ಪ್ರಶ್ನೆ-19 ಅ.ಸಾ-9, ಮುತ್ತಪ್ಪ ಪಾಟೀಲ್, ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿಃ19.04.2025 ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-12 ರವರಿಗಂದ ಪಡೆದುಕೊಂಡು ಅಲ್ಲಿಯವರೆಗೆ ಆದಂತಹ ತನಿಖೆಯನ್ನು ಪರಿಶೀಲಿಸಿ, ಅದೇ ದಿನ ಘಟನಾ ಸ್ಥಳಕ್ಕೆ ಬೇಟಿ ಕೊಟ್ಟು ಚಾಸಾ-2 ಮತ್ತು 3 ರವರನ್ನು ಹಾಜರುಪಡಿಸಿಕೊಂಡು ಪಂಚನಾಮೆಗೆ ಸಹಕರಿಸುವಂತೆ ಕೋರಿ ಪೋಲೀಸ ನೋಟಿಸ್ಸನು ಜಾರಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ-20 ಅ.ಸಾ-9, ಮುಂದುವರೆದು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಆಗ ಸದರಿ ಪಂಚರು ಒಪ್ಪಿಕೊಂಡ ಮೇರೆಗೆ ಸ್ಥಳದಲ್ಲಿ ಸಂಜೆ 04.00 ರಿಂದ 05-00 ಗಂಟೆ ಸಮಯದವರೆಗೆ ಚಾಸಾ-1 ರವರು ತೋರಿಸಿದ ಜಾಗದಲ್ಲಿ ಪಂಚರ ಸಮಕ್ಷಮ ನಿಪಿ-6 ರಂತೆ ಸ್ಥಳ ಪಂಚನಾಮೆ ಜರುಗಿಸಿ, ಪಿರ್ಯಾಧಿ ತೋರಿಸಿದ ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿದ ಹಿಡಿ ಗಾತ್ರದ ಒಂದು ಕಾಡು ಗಲ್ಲನ್ನು ಜಪ್ತು ಮಾಡಿಕೊಂಡು, ನಿಪಿ-7 ರಂತೆ ಪೋಟೋ ತೆಗೆದಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ-21 ಅ.ಸಾ-9, ಮುಂದುವರೆದು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ನಂತರ ಸ್ಥಳದಲ್ಲಿ ಹಾಜರಿದ್ದ ಪಿರ್ಯಾಧಿಯ ಮರು ಹೇಳಿಕೆ ಮತ್ತು ಸಾಕ್ಷಿದಾರರಾದ ಚಾಸಾ-4 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಠಾಣೆಗೆ ಹಿಂದುರುಗಿ ಜಪ್ತಾದ ಕಲ್ಲನ್ನು ಠಾಣಾ ಮಾಲು ಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ-22 ಅ.ಸಾ-9, ಮುಂದುವರೆದು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಅದೇ ದಿನ ಚಾಸಾ-9 ರವರು ಪಂಚನಾಮೆ ಕಾಲಕ್ಕೆ ತೆಗೆದ ಪೋಟೋ, ಅಡಕ ಮುದ್ರಿಕೆ ಮತ್ತು ಪ್ರಮಾಣ ಪತ್ರವನ್ನು ನೀಡಿದ್ದು, ಅವುಗಳನ್ನು ಸ್ವೀಕರಿಸಿ ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸಾಕ್ಷಿ

ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ–23 ಅ.ಸಾ–9, ಮುಂದುವರೆದು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕಃ09.05.2025 ರಂದು ಆರೋಪಿತರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ನನ್ನ ಮುಂದೆ ಹಾಜರಾಗಿ ಅದರ ಪ್ರತಿಯನ್ನು ಹಾಜರುಪಡಿಸಿದ ಮೇರೆಗೆ ಅವರನ್ನು ದಸ್ತಗಿರಿ ಮಾಡಿ ನಿಯಮ ಪಾಲಿಸಿ ನ್ಯಾಯಾಲಯದ ಆದೇಶದಂತೆ ಸೂಕ್ತ ಜಾಮೀನನ್ನು ಪಡೆದುಕೊಂಡು ಬಿಡುಗಡೆ ಮಾಡಿರುತ್ತೇನೆ, ಅದೇ ದಿನ ಚಾಸಾ–16 ರವರು ಬಂದು ಪ್ರಭಾರವನ್ನು ವಹಿಸಿಕೊಂಡ ಮೇರೆಗೆ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಅವರಿಗೆ ವಹಿಸಿಕೊಟ್ಟಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ–24 ಅ.ಸಾ–10, ಗಿರೀಶ್ ಭೋಜಣ್ಣನವರ, ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕಃ 20.04.2025 ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ–14 ರವರಿಂದ ಪಡೆದುಕೊಂಡು ಅಲ್ಲಿಯವರೆಗೆ ಆದಂತಹ ತನಿಖೆಯನ್ನು ಪರಿಶೀಲಿಸಿ, ಅದೇ ದಿನ ಚಾಸಾ–10 ಮತ್ತು 11 ರವರಿಗೆ ಪಿರ್ಯಾಧಿ ಮತ್ತು ಆರೋಪಿತರ ಜಾತಿ ಪ್ರಮಾಣ ಪತ್ರ ಮತ್ತು ಸ್ಥಳ ನಕಾಶೆಯನ್ನು ನೀಡುವಂತೆ ಕೋರಿ ಪತ್ರಗಳನ್ನು ಬರೆದಿರುತ್ತೇನೆ, ರಜೆಯ ಮೇಲೆ ತೆರಳಿದ ಕಾರಣ ಕಡತನ್ನು ಮುಂದಿನ ತನಿಖೆಗಾಗಿ ಚಾಸಾ–14 ರವರಿಗೆ ಪುನಃ ವಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ–25 ಅ.ಸಾ–11, ಲೋಕೇಶ ಜೆ. ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿನಾಂಕಃ09.05.2025 ರಂದು ಈ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ–15 ರವರಿಂದ ಪಡೆದುಕೊಂಡು ಅಲ್ಲಿಯವರೆಗೆ ಆದಂತಹ ತನಿಖೆಯನ್ನು ಪರಿಶೀಲಿಸಿರುತ್ತೇನೆ. ದಿಃ 21.05.2025 ರಂದು ಪಿರ್ಯಾಧಿ ಮತ್ತು ಆರೋಪಿತರ ಜಾತಿ ಪ್ರಮಾಣ ಪತ್ರಗಳನ್ನು ಚಾಸಾ– 10 ರವರಿಂದ ಪಡೆದುಕೊಂಡು, ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ–26 ಅ.ಸಾ–11, ಮುಂದುವರೆದು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ದಿಃ06.06.2025 ರಂದು ಚಾಸಾ–11 ರವರಿಂದ ಘಟನಾ ಸ್ಥಳದ ನಕಾಶೆಯನ್ನು ಪಡೆದುಕೊಂಡು, ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ09.06.2025 ರಂದು ಚಾಸಾ–1 ಗಾಯಾಳು ಇವರ ಗಾಯದ ಪ್ರಮಾಣ ಪತ್ರವನ್ನು ಚಾಸಾ–13 ರವರಿಂದ ಪಡೆದುಕೊಂಡು, ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಗಳ ವಿರುದ್ಧ ಸಾಕಷ್ಟು ಸಾಕ್ಷ್ಯದಾರಗಳು ಮತ್ತು ಪುರಾವೆಗಳು ಕಂಡು ಬಂದ ಕಾರಣ ಅವರ ಮೇಲೆ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉಃ

ಪ್ರಶ್ನೆ–27 ನಿಮಗೇನಾದರೂ ಈ ಪ್ರಕರಣಕ್ಕೆ ಕುರಿತಂತೆ ಹೆಚ್ಚಿಗೆ ಹೇಳುವುದಿದೆಯಾ?

ಉತ್ತರಃ

ಪ್ರಶ್ನೆ–28 ನಿಮ್ಮ ಪರವಾಗಿ ಏನಾದರೂ ಸಾಕ್ಷಿ ವಿಚಾರಣೆ ಇದೆಯೇ ?

ಉತ್ತರಃ

(ಆರೋಪಿಗೆ ಈ ಮೇಲಿನಂತೆ ಹೇಳಿಕೆಯ ಎಲ್ಲಾ ಪ್ರಶ್ನೆಗಳನ್ನು ಅವರಿಗೆ ತಿಳಿಯುವಂತೆ ಓದಿ ಹೇಳಿದ್ದು, ಆರೋಪಿತರು ಪ್ರತಿಯೊಂದು ಪ್ರಶ್ನೆಗೆ ಅವನು ಉತ್ತರಿಸಿದ ಉತ್ತರಗಳನ್ನು ಪ್ರತಿ ಪ್ರಶ್ನೆಯ ಎದುರು ತುಂಬಿದ್ದು, ಸದರೀ ಹೇಳಿಕೆಯು ಆರೋಪಿ ನೀಡಿದ ಉತ್ತರ ತುಂಬಿದ್ದೇನೆ ಆದ್ದರಿಂದ ನಾನು ಈ ಹೇಳಿಕೆಗೆ ಧೃಡೀಕರಣ ನೀಡಿದ್ದು ಇರುತ್ತದೆ)

ದಿನಾಂಕಃ28.07.2026 (ಎನ್.ಎಂ. ರಮೇಶ)

ಆರೋಪಿತರ ಸಹಿ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ